ಸದ್ಗುರುವೊಬ್ಬ ಸಿಕ್ಕರೆ ಆಧ್ಯಾತ್ಮಿಕ ಜೀವನವೆಂಬುದು ಸುಲಭಸಾಧ್ಯವಾಗುವುದು. ಆದರೆ ಸದ್ಗುರುವನ್ನು ಪಡೆಯುವುದು ಹೇಗೆ? ಇದರ ಬಗ್ಗೆ ಶ್ರೀರಾಮಕೃಷ್ಣರು ನಮಗೆ ಹೀಗೆ ಭರವಸೆ ನೀಡುತ್ತಾರೆ: "ದೇವರಿಗೆ ಸಂಬಂಧಪಟ್ಟ ರಹಸ್ಯವನ್ನು ತಿಳಿಯಬೇಕೆಂದು ನೀನು ಅತಿ ಕಾತರನಾಗಿದ್ದರೆ ಅವನು ನಿನಗೆ ಸದ್ಗುರುವನ್ನು ಕಳುಹಿಸಿಕೊಡುತ್ತಾನೆ. ಗುರುವನ್ನು ಹುಡುಕುವುದಕ್ಕೆ ನೀನು ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ."

"ಶಿಷ್ಯನು ತನ್ನ ಗುರುವನ್ನು ಕೇವಲ ಮನುಷ್ಯನೆಂದು ಭಾವಿಸಿದರೆ, ಏನೂ ಪ್ರಯೋಜನ ಸಿಕ್ಕುವುದಿಲ್ಲ" ಎಂದು ಎಚ್ಚರಿಸುತ್ತಾ, ಶ್ರೀರಾಮಕೃಷ್ಣರು ಮತ್ತೊಂದು ಸತ್ಯಾಂಶವನ್ನು ತಿಳಿಸುತ್ತಾರೆ. ಅವರೆನ್ನುತ್ತಾರೆ, "ಇರತಕ್ಕ ಗುರು ಕೇವಲ ಒಬ್ಬನೇ ಒಬ್ಬ, ಆತನೇ ಸಚ್ಚಿದಾನಂದ. ಸಚ್ಚಿದಾನಂದನೇ ಗುರುರೂಪ ಧರಿಸಿಬರುತ್ತಾನೆ. ಶ್ರದ್ಧೆಯೊಂದು ಉಂಟಾಯಿತು ಎಂದರೆ ಎಲ್ಲಾ ದೊರೆತ ಹಾಗೆಯೇ. ಕೆಳಜಾತಿಯ ಏಕಲವ್ಯ ದ್ರೋಣನ ಮಣ್ಣಿನ ಪ್ರತಿಮೆಯನ್ನೇ ಸಾಕ್ಷಾತ್ ದ್ರೋಣನೆಂದು ಭಾವಿಸಿ, ಅದನ್ನು ಪೂಜಿಸುತ್ತಿದ್ದ. ಈ ಪ್ರಕಾರವೇ ಆತ ಧನುರ್ವಿದ್ಯೆಯಲ್ಲಿ ಸಿದ್ಧಪುರುಷನಾದ."

ಗುರುವಾಕ್ಯವನ್ನನುಸರಿಸಿ ಸಾಧನಾಪಥದಲ್ಲಿ ಮುಂದುವರೆಯುವ ಶಿಷ್ಯನಿಗೆ, ತನ್ನ ಮನಸ್ಸೇ ಗುರುವಾಗಿ ಕೆಲಸ ಮಾಡಲು ಪ್ರಾರಂಭಿಸುತ್ತದೆ. "ಶುದ್ಧ ಮನಸ್ಸೇ ಶುದ್ಧ ಆತ್ಮ" ಎನ್ನುತ್ತಾರೆ ಶ್ರೀರಾಮಕೃಷ್ಣರು. ಸಾಧನೆಯ ಉದ್ದೇಶವೇ ಮನಸ್ಸನ್ನು ಪರಿಶುದ್ಧಗೊಳಿಸುವುದು. ಹೀಗೆ ಶುದ್ಧಗೊಂಡ ಮನಸ್ಸು ಆತ್ಮಪ್ರಕಾಶವನ್ನು ಹೆಚ್ಚು ಹೆಚ್ಚಾಗಿ ಬೀರಲು ಪ್ರಾರಂಭಿಸುತ್ತದೆ.

**ಅವತಾರದ ಕೃಪೆ** : ಸ್ವಯಂ ಅವತಾರಪುರುಷರೇ ಆದ ಶ್ರೀರಾಮಕೃಷ್ಣರು ಅವತಾರದ ಕೃಪೆಯ ಸಂಬಂಧವಾಗಿ ಹಲವು ಪ್ರಮುಖ ವಿಚಾರಗಳನ್ನು ಹೀಗೆ ತಿಳಿಯಪಡಿಸಿದ್ದಾರೆ: "ಅವತಾರವೆಂದರೆ ದೇವರಿಂದ ಬಂದ ಒಬ್ಬ ಸಂದೇಶವಾಹಕ. ಅವನು ದೊಡ್ಡ ಚಕ್ರಾಧಿಪತ್ಯದಲ್ಲಿರುವ ವೈಸರಾಯ್‌ನಂತೆ. ದೂರದ ಯಾವುದಾದರೂ ದೇಶದಲ್ಲಿ ಗಲಭೆಯಾದಾಗ ದೊರೆ ವೈಸರಾಯ್‌ನನ್ನು ಕಳುಹಿಸುವಂತೆ, ಜಗತ್ತಿನ ಯಾವ ಭಾಗದಲ್ಲಾದರೂ ಧರ್ಮಚ್ಯುತಿಯಾಗಿದ್ದರೆ, ಧರ್ಮವನ್ನು ಉದ್ಧಾರ ಮಾಡುವುದಕ್ಕಾಗಿ ದೇವರು ಅವತಾರಪುರುಷನನ್ನು ಕಳುಹಿಸುವನು."

ಪರಮಸಾತ್ತ್ವಿಕರಾದ ಸಜ್ಜನರು ದುರ್ಜನರಿಂದ ದೌರ್ಜನ್ಯಕ್ಕೆ ಒಳಗಾಗಿ ಬಳಲುತ್ತಿದ್ದರೂ, ಅವರಲ್ಲಿ ಪ್ರತೀಕಾರ ಮಾಡುವ ಪ್ರವೃತ್ತಿಯೇ ಇರುವುದಿಲ್ಲ. ಉದಾಹರಣೆಗೆ ಶ್ರೀರಾಮಕೃಷ್ಣರ ತಂದೆ ಕ್ಷುದಿರಾಮ ಚಟರ್ಜಿಯು ರಮಾನಂದ ರಾಯ್ ಎಂಬ ಜಮೀನುದಾರನಿಂದ ತಮ್ಮೆಲ್ಲ ಆಸ್ತಿಯನ್ನು ಕಳೆದುಕೊಂಡು ಬೀದಿಪಾಲಾದರೂ, ಪ್ರತಿಯಾಗಿ ಏನನ್ನೂ ಮಾಡಹೋಗಲಿಲ್ಲ. ಹೀಗಾದರೆ ದುಷ್ಟರ ಸಂಖ್ಯೆ ಹೆಚ್ಚಿ ಮಾನವಸಮಾಜ ಅದೆಂತಹ ದುಸ್ಥಿತಿಗಿಳಿಯುವುದೆಂಬುದನ್ನು ಭಾವಿಸಿಯೇ ನೋಡಬೇಕು. ಆಗ ಸ್ವಯಂ ಪರಮಾತ್ಮನೇ ಕೃಪಾಮಯನಾಗಿ ಜಗತ್ತಿನಲ್ಲಿ ಅವತಾರಗೈಯುವ ಶುಭಸಂದರ್ಭ ಒದಗಿಬರುತ್ತದೆ. ಇದನ್ನೇ ಶ್ರೀರಾಮಕೃಷ್ಣರು ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ವೈಸ್‌ರಾಯ್‌ನ ಉಪಮಾನದ ಮೂಲಕ ತಿಳಿಹೇಳಿದ್ದಾರೆ.

ದೇವರು ಸರ್ವಾಂತರ್ಯಾಮಿಯಾದರೂ ತನ್ನ ಸೃಷ್ಟಿಯಲ್ಲಿ ಧರ್ಮಜಾಗೃತಿಯನ್ನು ಉಂಟುಮಾಡಲು ತಾನೇ ಅವತಾರವೆತ್ತಬೇಕಾಗಿದೆ. ಒಬ್ಬ ಭಕ್ತ ಶ್ರೀರಾಮಕೃಷ್ಣರನ್ನು ಪ್ರಶ್ನಿಸಿದ, "ಮಹಾಶಯರೆ, ದೇವರು ಏಕೆ ಮಾನವರೂಪವನ್ನು ಧರಿಸಬೇಕು?" ಇದಕ್ಕೆ ಶ್ರೀರಾಮಕೃಷ್ಣರು ಹೀಗೆ ಉತ್ತರಿಸುತ್ತಾರೆ: "ಪವಿತ್ರತೆಯ ಪರಿಪೂರ್ಣತೆಯನ್ನು ಮಾನವನಿಗೆ ತೋರಿಸುವುದಕ್ಕಾಗಿ ದೇವರು ಅವತಾರವೆತ್ತುತ್ತಾನೆ. ದೇವರು ಅವತಾರಗೈದಾಗ ಮಾನವನು ದೇವರೊಂದಿಗೆ ಮಾತನಾಡಬಹುದು, ಅವನ ಲೀಲೆಯನ್ನು ನೋಡಬಹುದು. ಭಗವಂತನು ಮಹಾತ್ಮರಲ್ಲಿ ಹೂವಿನಲ್ಲಿರುವ ಮಕರಂದದ ಬಿಂದುವಿನಂತೆ ತನ್ನ ಅಂಶವನ್ನು ಮಾತ್ರ ವ್ಯಕ್ತಗೊಳಿಸುವನು. ಆದರೆ ಅವತಾರಪುರುಷರಲ್ಲಿ ಇರುವುದೆಲ್ಲ ಜೇನು. ಅಲ್ಲಿರುವುದೆಲ್ಲ ಮಾಧುರ್ಯವೇ, ಆನಂದಮಯವೇ."

ಅವತಾರಪುರುಷರ ಕೃಪೆ ಜಗತ್ತಿನಲ್ಲಿ ಯಾವ ರೀತಿಯಾಗಿ ಕಾರ್ಯ ನಿರ್ವಹಿಸುವುದು ಎನ್ನುವ ಬಗ್ಗೆ ಶ್ರೀರಾಮಕೃಷ್ಣರೆನ್ನುತ್ತಾರೆ, "ಅವತಾರಪುರುಷನಿಗೆ ಯಾವುದೂ ಅಸಾಧ್ಯವಲ್ಲ. ಜೀವನದ ಅತಿ ಕಷ್ಟಕರವಾದ ಸಮಸ್ಯೆಗಳನ್ನೂ ಅತ್ಯಂತ ಸಾಧಾರಣ ವಿಷಯಗಳಂತೆ ಬಗೆಹರಿಸುವನು. ಅವನ ಬೋಧನೆ ಒಂದು ಮಗುವೂ ಕೂಡ ತಿಳಿದುಕೊಳ್ಳುವಷ್ಟು ಸರಳವಾಗಿರುವುದು. ಪರಮಾರ್ಥ ಜ್ಞಾನಭಾಸ್ಕರನವನು. ಯುಗಯುಗಗಳಿಂದ ಕವಿದುಕೊಂಡಿರುವ ಅಜ್ಞಾನಾಂಧಕಾರವನ್ನು ಅವನು ಸುಲಭವಾಗಿ ಪರಿಹರಿಸುವನು."

ಅವತಾರಪುರುಷನ ಶಕ್ತಿಯೆಷ್ಟೆಂದರೆ ಒಬ್ಬ ನಾಸ್ತಿಕನ ಅಥವಾ ಕಟುಕನ ಹೃದಯದಲ್ಲಿಯೂ ಭಕ್ತಿಯು ಪ್ರಜ್ವಲಿಸುವಂತೆ ಮಾಡುವನು ಮತ್ತು ಅವನಿಗೆ ಮುಕ್ತಿಯನ್ನು ಕರುಣಿಸುವನು. ಅವತಾರಪುರುಷನನ್ನು ಪೂಜಿಸಿದರೆ ದೇವರನ್ನೇ ಪೂಜಿಸಿದಂತೆ. ಆದ್ದರಿಂದ ಅವತಾರಪುರುಷನನ್ನು ಧ್ಯಾನಿಸಿ, ಭಜಿಸಿ ಮುಕ್ತಿಯನ್ನು ಪಡೆಯಲು ಎಲ್ಲರೂ ಪ್ರಯತ್ನಿಸಬೇಕು. ▶

---

**ನಿಜವಾದ ಬೋಧನೆ ಯಾವುದು? ಇನ್ನೊಬ್ಬನಿಗೆ ಬೋಧನೆ ಮಾಡುವುದಕ್ಕಿಂತ ಸುಮ್ಮನೆ ದೇವರನ್ನು ಪೂಜೆಮಾಡಿದರೆ ಅದೇ ಸಾಕಾದಷ್ಟು ಬೋಧನೆಯನ್ನು ಮಾಡಿದಂತೆ ಆಯಿತು. ತಾನು ಮುಕ್ತನಾಗಲು ಯಾರು ಯತ್ನಿಸುವನೋ, ಅವನೇ ನಿಜವಾದ ಬೋಧಕನು. ಯಾರು ಮುಕ್ತರಾಗಿರುವರೋ ಅವರೆಡೆಗೆ ನೂರಾರು ಮಂದಿ ಹಲವು ಕಡೆಗಳಿಂದ ಬರುತ್ತಾರೆ. ಅವರು ಎಲ್ಲಿಂದ ಬರುವರು ಎಂಬುದು ಕೂಡ ಗೊತ್ತಿರುವುದಿಲ್ಲ. ಅವರು ಗುರುವಿನ ಬಳಿ ಬಂದು ಉಪದೇಶಗಳನ್ನು ಸ್ವೀಕರಿಸುತ್ತಾರೆ. ಮೊಗ್ಗು ಅರಳಿದರೆ ಹೇಗೆ ಕರೆಸಿಕೊಳ್ಳದೆ ದುಂಬಿಗಳು ನಾನಾ ಕಡೆಗಳಿಂದ ಬರುತ್ತವೆಯೋ, ಇದೂ ಕೂಡ ಹಾಗೆಯೇ.**

**–ಶ್ರೀರಾಮಕೃಷ್ಣ (ಶ್ರೀ ಗುರುದೇವರ ವಚನಗಳು, ಪು.೮೧)**

# ಸ್ತ್ರೀಭಕ್ತರಿಗೆ ಶ್ರೀರಾಮಕೃಷ್ಣರ ಬೋಧನೆ


ಪ್ರವ್ರಾಜಿಕಾ ಅತುಲಪ್ರಾಣಾ

ಅನೇಕ ಸ್ತ್ರೀಭಕ್ತರು ಶ್ರೀರಾಮಕೃಷ್ಣರ ಅನುಗ್ರಹವನ್ನು ಪಡೆದುಕೊಂಡಿದ್ದಾರೆ; ಸಂಸಾರದ ದುಃಖಾಗ್ನಿಯಲ್ಲಿ ಬೆಂದರೂ, ಪುಟವಿಟ್ಟ ಚಿನ್ನದಂತೆ ತಮ್ಮ ಬಾಳನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ಅಂತಹವರಲ್ಲಿ ಕೆಲವರ ಆತ್ಮೀಯ ಪರಿಚಯವನ್ನು ಮಾಡಿಕೊಟ್ಟಿರುವ ಪೂಜ್ಯ ಮಾತಾಜಿಯವರು ಬೆಂಗಳೂರಿನ ಶ್ರೀಶಾರದಾಮಠದ ಮುಖ್ಯಸ್ಥರು.

ದೀನ ಭಕ್ತೆಗೆ ದರುಶನವ ನೀಡು
ಬಾ, ಓ ಭಕುತರ ಲೀಲಾಬಂಧು !
ನಿನ್ನ ಪದತಳದಲ್ಲಿ ಸ್ಥಾನವನು ನೀಡು
ಓ ಪೂರ್ಣಸಿಂಧು !

ಭಗವಂತ ಲೀಲೆಯನ್ನು ಪ್ರೀತಿಸುತ್ತಾನೆ. ಆದ್ದರಿಂದ ಭಕ್ತರೊಡನೆ ಆನಂದದಿಂದ ಲೀಲಾಸಾಗರದಲ್ಲಿ ಈಜಾಡಲು ಪ್ರತಿ ಯುಗದಲ್ಲೂ ಒಂದೊಂದು ರೂಪ ಧರಿಸಿ ಬರುತ್ತಾನೆ. ಈ ಸಲ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ರೂಪದಲ್ಲಿ ಬಂದ ಈ ಭಕ್ತವತ್ಸಲ ಪ್ರಭುವಿನ ಲೀಲೆ ಬಹಳ ಆನಂದದಾಯಕವಾಗಿದೆ. ಅಲ್ಲಿನ ವಿಶಾಲ ಆಕಾಶದ ಕೆಳಗೆ, ಪವಿತ್ರ ಗಂಗಾತೀರದಲ್ಲಿ ಭಗವಂತನ ಈ ಲೀಲೆ ನಡೆಯಿತು.

**ಭಾಗವತ, ಭಕ್ತ, ಭಗವಾನ್** – ಮೂರು ಒಂದೇ, ಈ ಮೂರರ ಸಮ್ಮಿಲನದ ಮೂರ್ತಿಯೇ ಶ್ರೀರಾಮಕೃಷ್ಣರು. ಆದ್ದರಿಂದ ಅವರು ಶಾಸ್ತ್ರಮೂರ್ತಿ, ಭಕ್ತಚೂಡಾಮಣಿ ಮತ್ತು ಸಾಕ್ಷಾತ್ ಈಶ್ವರ ಕೂಡ. ಶ್ರೀರಾಮಕೃಷ್ಣರ ಕಳಕಳಿಯ ಕರೆಯಿಂದ ಅವರ ತ್ಯಾಗಿಶಿಷ್ಯರು ಅವರ ಬಳಿ ಓಡೋಡಿ ಬಂದರು. ಹಾಗೆಯೇ ಸಂಸಾರದ ತಾಪತ್ರಯಗಳ ಜ್ವಾಲೆಯಿಂದ ಪರಿತಪಿಸುತ್ತಿದ್ದ ಗೃಹೀಭಕ್ತರು ಕೂಡ ಸಾಂತ್ವನ ಪಡೆಯುವ ಉದ್ದೇಶದಿಂದ ಸೌಮ್ಯ, ಸರಳ, ಆನಂದಸ್ವರೂಪರಾದ ಶ್ರೀರಾಮಕೃಷ್ಣರ ಪದತಳದಲ್ಲಿ ತಮ್ಮನ್ನು ಸಮರ್ಪಿಸಿಕೊಳ್ಳಲು ಧಾವಿಸಿ ಬಂದರು.



ವಿಶಾಲಹೃದಯದ ಈ ಭಕ್ತರ ಗುಂಪಿನಲ್ಲಿ ಸಮಾಜದ ಶ್ರೇಷ್ಠ ವ್ಯಕ್ತಿಗಳಾದ ಕೇಶವಚಂದ್ರ ಸೇನ್, ಶಿವನಾಥಶಾಸ್ತ್ರಿ, ಗಿರೀಶ್‌ಚಂದ್ರ ಘೋಷ್ ಮುಂತಾದವರು ಇದ್ದಂತೆಯೇ, ಏಕಾಗ್ರಚಿತ್ತ ಭಕ್ತಿಮತಿ ನಾರಿಯರಾದ ರಾಣಿ ರಾಸಮಣಿ, ಗೋಪಾಲೇರ್ ಮಾ, ಯೋಗಿನ್‌ಮಾ, ನಿಸ್ತಾರಿಣೀ ಘೋಷ್, ವಸುಮತಿಮಾ, ನಿಕುಂಜದೇವಿ, ಲಕ್ಷ್ಮೀದೇವಿ ಮುಂತಾದವರೂ ಇದ್ದರು. ಅವರೆಲ್ಲರೂ ಶ್ರೀರಾಮಕೃಷ್ಣರಲ್ಲಿ ಆಕರ್ಷಿತರಾಗಿ, ಅವರನ್ನು ತಮ್ಮ ಜೀವನದ ಧ್ರುವತಾರೆಯನ್ನಾಗಿ ಮಾಡಿಕೊಂಡರು. ತಮ್ಮ ಬಳಿ ಬಂದ ಸ್ತ್ರೀಭಕ್ತರನ್ನೆಲ್ಲ ಮಾತೃರೂಪಿ ಶ್ರೀರಾಮಕೃಷ್ಣರು ತಾಯಿಯ ವಾತ್ಸಲ್ಯದಿಂದ ಸ್ವಾಗತಿಸಿದರು. ಇದೊಂದು ಅಪೂರ್ವವಾದ ಕಥೆ.

ಶ್ರೀರಾಮಕೃಷ್ಣರು ಕೇವಲ ಭಾವುಕಭಕ್ತ ಅಥವಾ ಶುಷ್ಕಜ್ಞಾನಿ ಆಗಿರಲಿಲ್ಲ. ಅವರು ಇವೆರಡರ ಸಮನ್ವಯಮೂರ್ತಿ. ತಮ್ಮ ಮನಸ್ಸು ಯಾವಾಗಲೂ ಭಗವಂತನಲ್ಲೇ ನೆಲೆಸಿದ್ದರೂ, ಅವರು ವ್ಯವಹಾರಕುಶಲರೂ ಆಗಿದ್ದರು. 'ಆಧ್ಯಾತ್ಮಿಕ ಜೀವನ' ಎನ್ನುವುದು ಐಹಿಕತೆಯಿಂದ ದೂರವಾದ ಯಾವುದೋ ಒಂದು ವಿಚಿತ್ರವಾದ ಬದುಕಲ್ಲ, ಲೌಕಿಕ ಜೀವನದಲ್ಲಿಯೂ ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಬಾಳಬೇಕೆಂದು ಮುಖ್ಯವಾಗಿ ಸ್ತ್ರೀಭಕ್ತರ ಮೂಲಕ ಶ್ರೀರಾಮಕೃಷ್ಣರು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ.

**ರಾಣಿ ರಾಸಮಣಿ:** ಶ್ರೀರಾಮಕೃಷ್ಣರು ತಮ್ಮ ಬಳಿಗೆ ಬಂದ ಸಾಧಕರೆಲ್ಲರ ಸಾಧನೆಗೆ ಚೈತನ್ಯವನ್ನು ತುಂಬಿ ಅವರ ಜೀವನ ಸಫಲವಾಗುವಂತೆ ಮಾಡಿದ ಆಧ್ಯಾತ್ಮಿಕ ಸಾಮ್ರಾಟರು. ಒಮ್ಮೆ ರಾಣಿ ರಾಸಮಣಿ ದಕ್ಷಿಣೇಶ್ವರಕ್ಕೆ ಬಂದು ಗಂಗೆಯಲ್ಲಿ ಮಿಂದು, ಭವತಾರಿಣಿಯ ಮುಂದೆ ಕುಳಿತು, ಒಂದು ಹಾಡನ್ನು ಹೇಳುವಂತೆ ಶ್ರೀರಾಮಕೃಷ್ಣರನ್ನು ಕೇಳಿಕೊಂಡಳು. ಶ್ರೀರಾಮಕೃಷ್ಣರು ಭಗವತಿಯ ಮೇಲೆ ಒಂದು ಹಾಡನ್ನು ಹೇಳುತ್ತಾ ಮೈಮರೆತರು. ಆಗ ರಾಸಮಣಿ ಅನ್ಯಮನಸ್ಕಳಾಗಿ ಯಾವುದೋ ಒಂದು ಕೋರ್ಟಿನ ವ್ಯವಹಾರದ ಬಗ್ಗೆ ಚಿಂತಿಸುತ್ತಿದ್ದಳು. ಇದನ್ನು ಗಮನಿಸಿದ ಶ್ರೀರಾಮಕೃಷ್ಣರು ಆಕೆಯ ಕೆನ್ನೆಗೆ ಏಟು ಕೊಟ್ಟು, "ಇಲ್ಲಿಯೂ ಅದೇ ಯೋಚನೆಯೇ" ಎಂದು ಹೇಳಿದರು. ರಾಣಿಗೆ ತನ್ನ ತಪ್ಪಿನ ಅರಿವಾಗಿ ತಕ್ಷಣ ಜಾಗೃತಳಾದಳು. ನಿತ್ಯಜೀವನದಲ್ಲಿ ಯಾವುದೇ

ರಂಗದಲ್ಲಿ ಏನೇ ಕೆಲಸ ಮಾಡಿದರೂ ಏಕಾಗ್ರತೆ ಅತಿ ಮುಖ್ಯ. ಆಧ್ಯಾತ್ಮಿಕ ಜೀವನದಲ್ಲಂತೂ ಏಕಾಗ್ರತೆ ಮತ್ತು ನಿಷ್ಠೆಗಳು ಸಾಧನೆಯ ಮೊದಲ ಮೆಟ್ಟಿಲುಗಳು; ಅವಿಲ್ಲದಿದ್ದರೆ ಸಾಧನೆ ಮಾಡಲು ಅಸಾಧ್ಯ ಎಂಬುದನ್ನು ಶ್ರೀರಾಮಕೃಷ್ಣರು ರಾಣಿ ರಾಸಮಣಿಯ ಮೂಲಕ ತೋರಿಸಿಕೊಟ್ಟಿದ್ದಾರೆ.

**ಲಕ್ಷ್ಮೀದೇವಿ:** ಒಮ್ಮೆ ಶ್ರೀರಾಮಕೃಷ್ಣರು ಕಾಮಾರಪುಕುರದಲ್ಲಿದ್ದಾಗ ಎಲ್ಲರೊಡನೆ ಮಾತನಾಡುತ್ತಾ, "ಶ್ರೀಕೃಷ್ಣನು ಕದಂಬವೃಕ್ಷದ ಕೆಳಗೆ ವಾಸ ಮಾಡುತ್ತಾನೆ" ಎಂದು ಹೇಳಿದರು. ಇದನ್ನು ಕೇಳಿಸಿಕೊಂಡ ಅವರ ಅಣ್ಣನ ಮಗಳು ಲಕ್ಷ್ಮೀದೇವಿ ಅದನ್ನು ಪರೀಕ್ಷೆ ಮಾಡಲು ಒಂದು ದಿನ ಕದಂಬವೃಕ್ಷವನ್ನು ಹುಡುಕಿಕೊಂಡು ಹೋದಳು. ಕೊನೆಗೆ ಹತ್ತಿರದ ಹಳ್ಳಿಯಲ್ಲಿ ಕದಂಬವೃಕ್ಷವನ್ನು ಪತ್ತೆ ಮಾಡಿ, ಅಲ್ಲಿ ಕೃಷ್ಣ ಬರುವನೆಂದು ದಿನವಿಡೀ ಕಾದಳು. ಕೊನೆಗೂ ಕೃಷ್ಣ ಬರಲಿಲ್ಲ. ನಿರಾಸೆಗೊಂಡು ಹಳ್ಳಿಗೆ ಹಿಂದಿರುಗಿ ರಾಮಕೃಷ್ಣರಿಗೆ ವಿಷಯ ತಿಳಿಸಿದಳು. ಆಗ ಅವರು, "ಕದಂಬವೃಕ್ಷ ಹೊರಗಿಲ್ಲ, ಮನಸ್ಸಿನ ಒಳಗೆ ಹುಡುಕಿದಾಗ ಅಲ್ಲಿ ದೇವರು ಕಾಣಿಸಿಕೊಳ್ಳುತ್ತಾನೆ" ಎಂದು ಹೇಳಿದರು. ಆಧ್ಯಾತ್ಮಿಕ ಜೀವನದಲ್ಲಿ ನಿಧಾನವಾಗಿ ಮನಸ್ಸನ್ನು ಅಂತರ್ಮುಖಿಗೊಳಿಸಿದಾಗ ಅಲ್ಲಿ ಭಗವಂತನ ದರ್ಶನ ಸಾಧ್ಯ ಎಂದು ಹೀಗೆ ಲಕ್ಷ್ಮೀದೇವಿಗೆ ಶ್ರೀರಾಮಕೃಷ್ಣರು ತಿಳಿಸಿದರು.

ಮುಂದೆ ಬಾಲವಿಧವೆಯಾದ ಲಕ್ಷ್ಮೀದೇವಿ ಶ್ರೀಮಾತೆ ಶಾರದಾದೇವಿಯವರೊಡನೆ ವಾಸಮಾಡಲು ದಕ್ಷಿಣೇಶ್ವರಕ್ಕೆ ಬಂದಳು. ಹೆಣ್ಣುಮಕ್ಕಳು ಆಧ್ಯಾತ್ಮಿಕ ಜೀವನ ನಡೆಸುತ್ತಿದ್ದರೂ, ಸಂಸಾರದಲ್ಲಿದ್ದುಕೊಂಡು ಹೊರಜಗತ್ತಿನಲ್ಲಿ ಹೇಗೆ ಬದುಕಬೇಕೆಂಬುದನ್ನು ರಾಮಕೃಷ್ಣರು ಆಕೆಗೆ ಪ್ರೀತಿಯಿಂದ ತಿಳಿಸಿಕೊಡುತ್ತಾರೆ. ಚಿಕ್ಕಮ್ಮನ (ಶ್ರೀಮಾತೆ) ಜೊತೆಯಲ್ಲಿ ದಿನನಿತ್ಯದ ಕೆಲಸಕಾರ್ಯಗಳನ್ನು ಮಾಡುತ್ತಾ ಆಧ್ಯಾತ್ಮಿಕ ಜೀವನವನ್ನು ನಡೆಸುವಂತೆ ಹೇಳುತ್ತಾರೆ. "ಮುಂದೆ ಪ್ರಪಂಚದಲ್ಲಿ ಒಂಟಿಯಾಗಿ ಬಾಳುವುದು ಸುಲಭವಲ್ಲ. ಒಬ್ಬಳೇ ತೀರ್ಥಯಾತ್ರೆಗೆ ಹೋಗಬೇಡ, ಅಲ್ಲಿ ಯಾರು ಯಾವಾಗ ಹೇಗೆ ನಿನಗೆ ತೊಂದರೆ ಕೊಡುತ್ತಾರೋ ಗೊತ್ತಿಲ್ಲ, ಯಾವಾಗಲೂ ಚಿಕ್ಕಮ್ಮನ ಜೊತೆಯಲ್ಲೇ ಇರು" ಎಂದು ಶ್ರೀರಾಮಕೃಷ್ಣರು ಅವಳಿಗೆ ಕಿವಿಮಾತು ಹೇಳಿದರು. ಅಲ್ಲದೆ, "ನೋಡು, ಸೀತೆ, ಸಾವಿತ್ರಿ, ಪಾರ್ವತಿ – ಎಲ್ಲರೂ ಪಾಕಪ್ರವೀಣೆಯರು. ಸ್ತ್ರೀಯರು ತಾವೇ ಅಡುಗೆ ಮಾಡುವುದು ಒಳ್ಳೆಯದು. ಆದರಿಂದ ಮನಸ್ಸಿಗೆ ಏಕಾಗ್ರತೆ, ಆನಂದ ಉಂಟಾಗುತ್ತದೆ" ಎಂದು ಹೇಳುತ್ತಿದ್ದರು. ಹೀಗೆ ಸ್ತ್ರೀಯರು ಸ್ವತಃ ತಮ್ಮ ಕೈಯಿಂದಲೇ ಅಡುಗೆ ಮತ್ತು ಇತರ ಮನೆಕೆಲಸಗಳನ್ನು ಮಾಡುವಂತೆ ಶ್ರೀರಾಮಕೃಷ್ಣರು ಪ್ರೋತ್ಸಾಹಿಸುತ್ತಿದ್ದರು.

**ನಿಸ್ತಾರಿಣೀ ಘೋಷ್ :** ನವಗೋಪಾಲ್ ಘೋಷ್‌ರ ಪತ್ನಿ ನಿಸ್ತಾರಿಣೀ ಘೋಷ್ ಶ್ರೀರಾಮಕೃಷ್ಣರ ಭಕ್ತೆ; ಶುದ್ಧಮನಸ್ಸಿನ ಸರಳತೆಯ ಪ್ರತಿರೂಪ ಅವರು; ಸಂಸಾರದಲ್ಲಿದ್ದರೂ ತಾವರೆ ಎಲೆಯಂತೆ ನಿಸ್ಸಂಗದ ಬದುಕನ್ನು ನಡೆಸಿದವರು. ಹೀಗಾಗಿ ಸ್ವಯಂ ರಾಮಕೃಷ್ಣರೇ ಆಕೆಯ ಕೈಯಿಂದ ತಮ್ಮ ಬಾಯಿಗೆ ಸಿಹಿತಿಂಡಿಯನ್ನು ಹಾಕಿಸಿಕೊಳ್ಳುತ್ತಿದ್ದರು. ಒಂದು ಸಲ ಶ್ರೀರಾಮಕೃಷ್ಣರ ಕೊಠಡಿಯಲ್ಲಿ ಒಂದು ತಾಯಿಬೆಕ್ಕು ತನ್ನೆರಡು ಮರಿಗಳೊಡನೆ ವಾಸಮಾಡಲು ಆರಂಭಮಾಡಿತು. ಒಮ್ಮೊಮ್ಮೆ ತಾಯಿಬೆಕ್ಕು ರಾಮಕೃಷ್ಣರ ಹಾಸಿಗೆಯ ಮೇಲೆ, ಅವರ ಕಾಲುಗಳ ಹತ್ತಿರ ಮಲಗಿ ನಿದ್ರಿಸುತ್ತಿತ್ತು. ಶ್ರೀರಾಮಕೃಷ್ಣರು ಕೈಯಿಂದ ಮುಟ್ಟಿದರೆ, ಮೇಲೆದ್ದು ನಿಂತು ನಮಸ್ಕಾರ ಮಾಡುವಂತೆ ಬಾಗುತ್ತಿತ್ತು. ಅಲ್ಲಿಯೇ ಇದ್ದರೆ ಆ ಬೆಕ್ಕುಗಳಿಗೆ ಸರಿಯಾಗಿ ಆಹಾರ ಸಿಕ್ಕುವುದಿಲ್ಲವೆಂದು ತಿಳಿದು, ರಾಮಕೃಷ್ಣರು ಅವುಗಳನ್ನು ನಿಸ್ತಾರಿಣಿಯ ಕೈಯಲ್ಲಿ ಕೊಡುತ್ತಾ, ಅವನ್ನು ಸರಿಯಾಗಿ ನೋಡಿಕೊಳ್ಳುವಂತೆ ಪದೇಪದೇ ಕೇಳಿಕೊಂಡರು. ಇದಲ್ಲದೆ ಆಕೆ ದಕ್ಷಿಣೇಶ್ವರಕ್ಕೆ ಬಂದಾಗಲೆಲ್ಲ ಬೆಕ್ಕುಗಳ ಕ್ಷೇಮಸಮಾಚಾರವನ್ನು ವಿಚಾರಿಸಿಕೊಂಡು, ಅವುಗಳಿಗೆ ಸರಿಯಾಗಿ ಆಹಾರ ಸಿಕ್ಕುತ್ತಿದೆಯೇ ಎಂದು ತಿಳಿದುಕೊಳ್ಳುತ್ತಿದ್ದರು. ಮನುಷ್ಯರು ಮಾತ್ರವಲ್ಲ, ಪ್ರಾಣಿಗಳೂ ಸಹ ಕುಟುಂಬದಲ್ಲಿನ ಸದಸ್ಯರು; ಅವುಗಳನ್ನೂ ಸರಿಯಾಗಿ ನೋಡಿಕೊಳ್ಳಬೇಕೆಂದು ನಿಸ್ತಾರಿಣಿಯ ಮೂಲಕ ಶ್ರೀರಾಮಕೃಷ್ಣರು ಗೃಹಿಣಿಯರಿಗೆ ಬೋಧನೆ ಮಾಡಿದ್ದಾರೆ.

**ಯೋಗಿನ್‌ಮಾ :** ಪತಿಯು ಕಾಯಿಲೆಯಿಂದ ನರಳುತ್ತಿದ್ದರೆ ಅವನ ಸೇವೆಯನ್ನು ಮಾಡುವುದು ಸತಿಯ ಕರ್ತವ್ಯ ಎಂದು ಹೇಳಿ, ಕಾಯಿಲೆಯಿಂದ ನರಳುತ್ತಿದ್ದ ಪತಿಯ ಸೇವೆ ಮಾಡುವಂತೆ ಯೋಗಿನ್‌ಮಾಗೆ ಮಮತಾಮಯಿ ತಾಯಿಯಂತೆ ಶ್ರೀರಾಮಕೃಷ್ಣರು ಉಪದೇಶ ಮಾಡಿದರು. ಮನಸ್ಸನ್ನು ಸಂಪೂರ್ಣವಾಗಿ ದೇವರ ಮೇಲಿಡಲು ಸಾಧ್ಯವಾಗುತ್ತಿಲ್ಲ ಎಂದು ಯೋಗಿನ್‌ಮಾ ರಾಮಕೃಷ್ಣರಿಗೆ ಹೇಳಿದಾಗ, "ಭಗವಂತನಲ್ಲಿ ಶರಣಾಗು. ಬಿರುಗಾಳಿಗೆ ಸಿಕ್ಕಿದ ತರಗೆಲೆಯಂತೆ ಇರು. ಒಣಗಿದ ಎಲೆಯನ್ನು ಗಾಳಿ ಎಲ್ಲಿ ಎತ್ತಿ ಹಾರಿಸಿಕೊಂಡು ಹೋಗುತ್ತದೆಯೋ, ಅದು ಅಲ್ಲಿಗೆ ಹಾರುತ್ತದೆ. ಹಾಗೆಯೇ ದೇವರನ್ನು ನಂಬಿ, ಅವನ ಶಕ್ತಿಯಲ್ಲಿ ಭರವಸೆ ಇಟ್ಟುಕೊಂಡು ಬಾಳಲು ಪ್ರಯತ್ನಿಸು" ಎಂದು ತಿಳಿಹೇಳಿದರು.

ವಿದ್ಯೆ, ಶ್ರೀಮಂತಿಕೆ, ಕೀರ್ತಿ ಇರುವ ವ್ಯಕ್ತಿ ಸಾಮಾನ್ಯ ಕೆಲಸಗಳನ್ನು ಮಾಡಲು ಹಿಂಜರಿಯುತ್ತಾನೆ, ನಾಚಿಕೆ, ದ್ವೇಷ, ಭಯ ಇವುಗಳಿಂದ ಬಿಡುಗಡೆ ಪಡೆಯದೆ ಇದ್ದರೆ ವ್ಯಕ್ತಿ ಪರಿಪೂರ್ಣನಾಗಲಾರ. ಹಾಗೆಂದೇ ಶ್ರೀರಾಮಕೃಷ್ಣರು, ಯೋಗಿನ್‌ಮಾ ಮತ್ತು ಇತರ ಮಹಿಳೆಯರಿಗೆ ಸ್ವತಃ ತಾವೇ ಮಾರುಕಟ್ಟೆಗೆ ಹೋಗಿ ಸಾಮಾನುಗಳನ್ನು ತರಲು ಹೇಳುತ್ತಿದ್ದರು. ಆ ಮೂಲಕ ಅವರಲ್ಲಿದ್ದ ನಾಚಿಕೆಯ ಸ್ವಭಾವವನ್ನು ದೂರಮಾಡಲು ಪ್ರಯತ್ನಿಸಿದರು.

**ಗೋಪಾಲೇರ್‌ಮಾ:** ಬಾಲವಿಧವೆಯಾದ ಗೋಪಾಲೇರ್‌ಮಾ ಅತ್ಯಂತ ಆಚಾರವಂತೆ. ಶ್ರೀರಾಮಕೃಷ್ಣರ ಬಳಿ ಬಂದಾಗ ದಕ್ಷಿಣೇಶ್ವರದಲ್ಲಿ ಆಕೆ ಸ್ವಯಂಪಾಕ ಮಾಡಿಕೊಳ್ಳುತ್ತಿದ್ದರು. ಒಮ್ಮೆ ಶ್ರೀರಾಮಕೃಷ್ಣರಿಗೆ ಊಟ ಬಡಿಸುತ್ತಿದ್ದಾಗ ಆಕಸ್ಮಾತ್ ಅವರು ಆ ಪಾತ್ರೆಯನ್ನು ಮುಟ್ಟಿಬಿಟ್ಟರು. ಆಗ ಆಕೆ ಪಾತ್ರೆಯಲ್ಲಿದ್ದ ಪದಾರ್ಥವನ್ನೆಲ್ಲ ಗಂಗೆಗೆ ಹಾಕಿ, ಇಡೀ ದಿನ ಉಪವಾಸ ಮಾಡಿದರು. ಹೀಗೆ